# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/09/2008ರ ನಡವಳಿಗಳು**

**ವಿಷಯದ ಸಂಖ್ಯೆ:467/2008-09**

Widening and Providing and footpath at 14th cross from K.R.Road to 2nd Main TR Nagar in Ward No.56 ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Widening and Providing and footpath at 14th cross from K.R.Road to 2nd Main TR Nagar in Ward No.56 ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಬಸವನಗುಡಿ-2) ರವರು ಮೊದಲನೇ ಕರೆಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಎರಡು) ಟೆಂಡರ್‌ದಾರರ ತಾಂತ್ರಿಕ ಬಿಡ್‌ನಲ್ಲಿ ಸಿಂಧುವಾಗಿರುತ್ತದೆ. ಕಾರ್ಯಪಾಲಕ ಅಭಿಯಂತರರು (ಬಸವನಗುಡಿ-2) ರವರು ಕನಿಷ್ಟ ಟೆಂಡರ್‌ದಾರರಾದ ಶ್ರೀ.ಎಲ್.ಆರ್.ಶಂಭುಲಿಂಗಪ್ಪ, ಗುತ್ತಿಗೆದಾರರ ಟೆಂಡರ್‌ನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.100.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007-08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಕಾರ್ಯಪಾಲಕ ಅಭಿಯಂತರರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನಿರೀಕ್ಷಿಸಿ ಟೆಂಡರ್ ಕರೆದಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.84,35,247.38 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಎಲ್.ಆರ್.ಶಂಭುಲಿಂಗಪ್ಪ, ರವರು ಶೇಕಡ 27.59% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಟ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಕಾರ್ಯಪಾಲಕ ಅಭಿಯಂತರರು (ಬಸವನಗುಡಿ-2) ರವರು ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ, ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿದ ಶೇಕಡ 16.93% ರಷ್ಟು ಹೆಚ್ಚುವರಿ ದರಗಳು ಸಮರ್ಪಕವಾಗಿದ್ದು ಮತ್ತು ಲೋಕೋಪಯೋಗಿ ಇಲಾಖೆಯಿಂದ ಇತ್ತೀಚೆಗೆ ಹೊರಡಿಸಿದ ಸುತ್ತೋಲೆಯಂತೆ ಸಿಮೆಂಟ್‌ನ ವ್ಯತ್ಯಾಸದ ದರವನ್ನು ಪರಿಗಣಿಸಿ ನಮೂದಿಸಿದ ದರಗಳಾದ ಶೇಕಡ 14.99% ರಷ್ಟು ಹೆಚ್ಚುವರಿ ದರಗಳನ್ನು ನೀಡಿದಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಸಿದ್ಧನಿರುತ್ತೇನೆಂದು ಸಂಧಾನ ಪತ್ರ ನೀಡಿರುತ್ತಾರೆ. ಸದರಿ ಟೆಂಡರ್‌ನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ದಕ್ಷಿಣ) ರವರು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.98,63,334.76 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ/116/ಎಂಎಲ್‌ಆರ್/2002, ದಿನಾಂಕ:24/01/2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು, ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಡಳಿತಗಾರ ರವರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಎಲ್.ಆರ್.ಶಂಭುಲಿಂಗಪ್ಪ, ರವರು 2007-08ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿದ ದರಗಳಿಗೆ ಸಿಮೆಂಟಿನ ವ್ಯತ್ಯಾಸದ ದರಗಳನ್ನು ಪರಿಗಣಿಸಿ ಬಂದಂತಹ ಶೇಕಡ 14.99% ರಷ್ಟು ಹೆಚ್ಚುವರಿ ದರಗಳು ಅಥವಾ ರೂ.98,63,334.76 (ರೂ.ತೊಂಭತ್ತೆಂಟು ಲಕ್ಷದ ಅರವತ್ತ್ಮೂರು ಸಾವಿರದ ಮೂನ್ನೂರ ಮೂವತ್ನಾಲ್ಕು ಮತ್ತು ಪೈಸೆ ಎಪ್ಪತ್ತಾರು ಮಾತ್ರ) ಗಳ ಟೆಂಡರ್ ಅನುಮೋದಿಸಲು ಮತ್ತು ಸದರಿ ಕಾಮಗಾರಿಯ ಅಂದಾಜು ಮೊತ್ತವಾದ 100.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:27/08/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:27/08/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16-09-2008 ರ ನಡವಳಿಗಳು

ವಿಷಯ ಸಂಖ್ಯೆ:494/2008-09

ಮಹಾರಾಣಿ ಕಾಲೇಜ್ ಹತ್ತಿರ ವಾಹನ ಸುರಂಗ ಮಾರ್ಗ ನಿರ್ಮಿಸಲು ಆರ್.ಸಿ.ಸಿ.ಪ್ರಿಕ್ಯಾಸ್ಟ್ 6.0X4.50X1.0 ಅಳತೆಯ ಬಾಕ್ಸ್‌ಗಳನ್ನು ಅಳವಡಿಸಿಕೊಂಡು ವಾಹನ ಸುರಂಗ ಮಾರ್ಗ ನಿರ್ಮಿಸುವ ಕಾಮಗಾರಿ ಬಗ್ಗೆ.

ಪ್ರಸ್ತಾವನೆ:

ಮಹಾರಾಣಿ ಕಾಲೇಜ್ ವೃತ್ತದಲ್ಲಿ ನಿರ್ಮಿಸಲಾಗುವ ವಾಹನ ಸುರಂಗ ಮಾರ್ಗಕ್ಕೆ 6.0X4.50X1.0 ಅಳತೆಯ ಅರ್.ಸಿ.ಸಿ.ಪ್ರಿಕ್ಯಾಸ್ಟ್ ಬಾಕ್ಸ್ ಸೆಗೆಮೆಂಟ್ಸ್ ತಾಂತ್ರಿಕತೆಯನ್ನು ಅಳವಡಿಸಿಕೊಂಡು ಕಾಮಗಾರಿ ಕೈಗೊಳ್ಳಲು ಉದ್ದೇಶಿಸಿದ್ದು, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ. 89.55 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯು ದೊರಕಿದ್ದು, ಸದರಿ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿರುತ್ತದೆ. ಸದರಿ ಟೆಂಡರ್ ನಲ್ಲಿ ಮೆ:ಪರಿಚಿತ ಕನ್‌ಸ್ಟ್ರಕ್ಷನ್ಸ್ ಮತ್ತು ಶ್ರೀ.ಕೆ. ಸೋಮಪ್ಪ, ಗುತ್ತಿಗೆದಾರರುಗಳು ಭಾಗಹಿಸಿದ್ದು, ಮೆ:ಪರಿಚಿತ ಕನ್‌ಸ್ಟ್ರಕ್ಷನ್ಸ್ ರವರು ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು ಅರ್ಹರಾಗಿರುತ್ತಾರೆ.

ಮೆ:ಪರಿಚಿತ ಕನ್‌ಸ್ಟ್ರಕ್ಷನ್ಸ್ ರವರು ಒಟ್ಟು ರೂ.1,17,36,000.00 ನಮೂದಿಸಿದ್ದು, ಇದು ಅನುಮೋದಿತ ಡೆಟಾ ರೇಟ್ ಹಾಗೂ 08-09ನೇ ಸಾಲಿನ 2ನೇ ತ್ರೈಮಾಸಿಕ ಉಕ್ಕು, ಸಿಮೆಂಟ್ ದರಸೂಚಿಗೆ ಹೋಲಿಸಿದಲ್ಲಿ ಶೇ.22.17%ರಷ್ಟು ಹೆಚ್ಚಾಗಿರುತ್ತದೆ. ತದರನ್ವಯ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿ ಗುತ್ತಿಗೆದಾರರು ನಮೂದಿಸಿರುವ ದರಗಳು ಸ್ಪರ್ಧಾತ್ಮಕ ದರಗಳೆಂದು ತಿಳಿಸುತ್ತಾ, ಕಾಮಗಾರಿಯನ್ನು ಶೇ.21.00% ಗಳಿಗೆ ನಿರ್ವಹಿಸಲು ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಗುತ್ತಿಗೆದಾರರಾದ ಮೆ:ಪರಿಚಿತ ಕನ್‌ಸ್ಟ್ರಕ್ಷನ್ಸ್ ರವರು ನಮೂದಿಸಿರುವ ಮೊತ್ತ ರೂ.1,16,23,986.00 ಗಳಾಗಿದ್ದು ಇದನ್ನು 2008-09ನೇ ಸಾಲಿನ 2ನೇ ತ್ರೈಮಾಸಿಕ ಉಕ್ಕು, ಸಿಮೆಂಟ್ ದರಗಳಿಗೆ ಹೋಲಿಸಿದಾಗ ಶೇ 21.00% ರಷ್ಟು ಹೆಚ್ಚಿಸಿರುವ ಸದರಿ ಕಾಮಗಾರಿಯ ಈ ಟೆಂಡರ್‌ನ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11/09/2008 ರ ಟಿಪ್ಪಣಿ.

ನಿರ್ಣಯ: ಆಯುಕ್ತರವರ ದಿನಾಂಕ:11/09/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16-09-2008 ರ ನಡವಳಿಗಳು

**ವಿಷಯದ ಸಂಖ್ಯೆ:495/2008-09**

Asphalting to Ring Road from Mysore Road Junction to Silk Board junction Via J.P.Nagar,BTM Layout Ch:8.80km to 10.00km & 11.30km to 11.80km Left side Carriage way (Southern Side) ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Asphalting to Ring Road from Mysore Road Junction to Silk Board junction Via J.P.Nagar,BTM Layout Ch:8.80km to 10.00km & 11.30km to 11.80km Left side Carriage way (Southern Side) ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-2) ರವರು ಮೊದಲನೇ ಕರೆಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಎರಡು) ಟೆಂಡರ್‌ದಾರರ ತಾಂತ್ರಿಕ ಬಿಡ್ ಸಿಂಧುವಾಗಿರುತ್ತದೆ. ಕಾರ್ಯಪಾಲಕ ಅಭಿಯಂತರರು (ಯೋಜನೆ- ಕೇಂದ್ರ-2)ರವರು ಕನಿಷ್ಟ ಟೆಂಡರ್‌ದಾರರಾದ ಶ್ರೀ.ಪಿ.ಆರ್.ಸುರೇಶ್, ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.98.50 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007-08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಕಾರ್ಯಪಾಲಕ ಅಭಿಯಂತರರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನಿರೀಕ್ಷಿಸಿ ಟೆಂಡರ್ ಕರೆದಿರುತ್ತಾರೆ. ಸದರಿ ಕಾಮಗಾರಿಯು ಟೆಂಡರ್‌ಗಿಟ್ಟ ಮೊಬಲಗು ರೂ.98,49,942.25 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಪಿ.ಆರ್.ಸುರೇಶ್, ರವರು ಶೇಕಡ 41.24% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಟ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-2) ರವರು ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ, ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿದ ಶೇಕಡ 31.21% ರಷ್ಟು ಹೆಚ್ಚುವರಿ ದರಗಳು ಸಮರ್ಪಕವಾಗಿದ್ದು ಮತ್ತು ಲೋಕೋಪಯೋಗಿ ಇಲಾಖೆಯಿಂದ ಇತ್ತೀಚೆಗೆ ಹೊರಡಿಸಿದ ಸುತ್ತೋಲೆಯಂತೆ ಸಿಮೆಂಟ್ ಮತ್ತು ಬಿಟುಮಿನ್ ವ್ಯತ್ಯಾಸದ ದರವನ್ನು ಪರಿಗಣಿಸಿ ನಮೂದಿಸಿದ ದರಗಳಾದ ಶೇಕಡಾ 14.46%ರಷ್ಟು ಹೆಚ್ಚುವರಿ ದರಗಳನ್ನು ನೀಡಿದ್ದಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಸಿದ್ದನಿರುತ್ತೇನೆಂದು ಸಂಧಾನ ಪತ್ರ ನೀಡಿರುತ್ತಾರೆ. ಸದರಿ ಟೆಂಡರ್‌ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ಯೋಜನೆ) ರವರು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತ (ಟೆಂಡರ್ ಪ್ರೀಮಿಯಂ ಸೇರಿ) ರೂ.1,29,24,146.35 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ/116/ಎಂಎನ್‌ಜೆ/2002, ದಿನಾಂಕ:24/01/2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ, ನಿಯಮಗಳು 1977 ನಿಯಮ 4ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು, ಅದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಯುಕ್ತರು/ಆಡಳಿತಗಾರರು ರವರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಪಿ.ಆರ್.ಸುರೇಶ್, ರವರು 2007-08ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿದ ದರಗಳಿಗೆ ಸಿಮೆಂಟ್ ಮತ್ತು ಬಿಟುಮಿನ್ ವ್ಯತ್ಯಾಸದ ದರವನ್ನು ಪರಿಗಣಿಸಿ ಬಂದಂತಹ ಶೇಕಡಾ 14.46ರಷ್ಟು ಹೆಚ್ಚುವರಿ ದರಗಳು ಅಥವಾ ರೂ.1,29,24,146.35 (ರೂ.ಒಂದು ಕೋಟಿ ಇಪ್ಪತ್ತೊಂಬತ್ತು ಲಕ್ಷದ ಇಪ್ಪತ್ತನಾಲ್ಕು ಸಾವಿರದ ಒಂದು ನೂರ ನಲವತ್ತಾರು ಮತ್ತು ಪೈಸೆ ಮೂವತ್ತೈದು ಮಾತ್ರ) ಗಳ ಟೆಂಡರ್ ಅನುಮೋದಿಸಲು ಮತ್ತು ಸದರಿ ಕಾಮಗಾರಿಯ ಅಂದಾಜು ಮೊತ್ತವಾದ ರೂ.98.50 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11/09/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:11/09/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16–09–2008 ರ ನಡವಳಿಗಳು

ವಿಷಯದ ಸಂಖ್ಯೆ:496/2008–09

ಮಹಾರಾಣಿ ಕಾಲೇಜ್ ವೃತ್ತದಲ್ಲಿ ವಾಹನ ಸುರಂಗ ಮಾರ್ಗಕ್ಕೆ ಎದುರು ರಸ್ತೆ ನಿರ್ಮಿಸುವ ಕಾಮಗಾರಿ ಬಗ್ಗೆ.

ಪ್ರಸ್ತಾವನೆ:

ಮಹಾರಾಣಿ ಕಾಲೇಜ್ ವೃತ್ತದಲ್ಲಿ ವಾಹನ ಸುರಂಗ ಮಾರ್ಗಕ್ಕೆ ಎದುರು ರಸ್ತೆ ನಿರ್ಮಿಸಲು ಉದ್ದೇಶಿಸಿರುವ ಕಾಮಗಾರಿಯ ಅಂದಾಜು ಪಟ್ಟಿ ರೂ.63.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯ ದೊರಕಿದ್ದು. ಸದರಿ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿರುತ್ತದೆ. ಸದರಿ ಟೆಂಡರ್ ನಲ್ಲಿ ಮೆ:ಪರಿಚಿತ ಕನ್ಸ್‌ಟ್ರಕ್ಷನ್ಸ್ ಮತ್ತು ಶ್ರೀ.ಎಸ್.ಆರ್.ಗಣೇಶ್, ಗುತ್ತಿಗೆದಾರರುಗಳು ಅರ್ಹರಾಗಿದ್ದು, ಮೆ:ಪರಿಚಿತ ಕನ್ಸ್‌ಟ್ರಕ್ಷನ್ಸ್ ರವರು ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು ಅರ್ಹರಾಗಿರುತ್ತಾರೆ.

ಮೆ:ಪರಿಚಿತ ಕನ್ಸ್‌ಟ್ರಕ್ಷನ್ಸ್ ರವರು ಒಟ್ಟು ರೂ.81,19,150.00 ನಮೂದಿಸಿದ್ದು, ಇದು ಅನುಮೋದಿತ ಜಾಬ್ ರೇಟ್ ಹಾಗೂ 08–09ನೇ ಸಾಲಿನ 2ನೇ ತ್ರೈಮಾಸಿಕ ಉಕ್ಕು, ಸಿಮೆಂಟ್ ದರಸೂಚಿಗೆ ಹೋಲಿಸಿದಲ್ಲಿ ಶೇ.27.77%ರಷ್ಟು ಹೆಚ್ಚಾಗಿರುತ್ತದೆ. ತದರನ್ವಯ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿ ಗುತ್ತಿಗೆದಾರರು ನಮೂದಿಸಿರುವ ದರಗಳು ಸ್ಪರ್ಧಾತ್ಮಕ ದರಗಳೆಂದು ತಿಳಿಸುತ್ತಾ, ಕಾಮಗಾರಿಯನ್ನು ಶೇ.24.50% ಗಳಿಗೆ ನಿರ್ವಹಿಸಲು ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಗುತ್ತಿಗೆದಾರರಾದ ಮೆ:ಪರಿಚಿತ ಕನ್ಸ್‌ಟ್ರಕ್ಷನ್ಸ್ ರವರ ನಮೂದಿಸಿರುವ ಮೊತ್ತ ರೂ.79,11,430.00 ಗಳಾಗಿದ್ದು, ಇದನ್ನು 2008–09ನೇ ಸಾಲಿನ 2ನೇ ತ್ರೈಮಾಸಿಕ ಉಕ್ಕು, ಸಿಮೆಂಟ್ ದರಗಳಿಗೆ ಹೋಲಿಸಿದಾಗ ಶೇ 24.50%ರಷ್ಟು ಹೆಚ್ಚಿರುವ ಸದರಿ ಕಾಮಗಾರಿಯ ಟೆಂಡರ್‌ನ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11/09/2008 ರ ಟಿಪ್ಪಣಿ.

ನಿರ್ಣಯ: ಆಯುಕ್ತರವರ ದಿನಾಂಕ:11/09/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16-09-2008 ರ ನಡವಳಿಗಳು**

**ವಿಷಯದ ಸಂಖ್ಯೆ:497/2008-09**

Additional works required for the completion of Phase-1 works for development of Freedom Park ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Additional works required for the completion of Phase-1 works for development of Freedom Park ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಯೋಜನೆ-2)ರವರು ಮೊದಲನೇ ಕರೆಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 03 ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಎರಡು) ಟೆಂಡರ್‌ದಾರರ ತಾಂತ್ರಿಕ ಬಿಡ್ ಸಿಂಧುವಾಗಿರುತ್ತವೆ. ಕಾರ್ಯಪಾಲಕ ಅಭಿಯಂತರರು (ಯೋಜನೆ-2)ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ.ಕೆ.ದಾಮೋದರ್ ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.99.30 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007-08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಮುಖ್ಯ ಅಭಿಯಂತರರು (ಯೋಜನೆ-2) ರವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ್ದು, ಟೆಂಡರ್‌ಗಿಟ್ಟ ಮೊಬಲಗು ರೂ.99,28,956.00 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಕೆ.ದಾಮೋದರ್ ರವರು ಶೇಕಡ 24.16% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಕಾರ್ಯಪಾಲಕ ಅಭಿಯಂತರರು (ಯೋಜನೆ-2) ರವರು ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ, ಗುತ್ತಿಗೆದಾರರು ಸಂಧಾನದ ನಂತರ ಶೇಕಡ 22.47% ರಷ್ಟು ಹೆಚ್ಚುವರಿ ದರಗಳಿಗೆ ಕಾರ್ಯನಿರ್ವಹಿಸಲು ಒಪ್ಪಿಗೆ ನೀಡಿರುತ್ತಾರೆ. ಸದರಿ ಸಂಧಾನದ ದರಗಳನ್ನು ಲೋಕೋಪಯೋಗಿ ಇಲಾಖೆಯಿಂದ ಇತ್ತೀಚೆಗೆ ಹೊರಡಿಸಿದ ಸುತ್ತೋಲೆಯಂತೆ ಸಿಮೆಂಟ್ ಮತ್ತು ಸ್ಟೀಲ್‌ನ ವ್ಯತ್ಯಾಸದ ದರಗಳಿಗೆ ಹೋಲಿಸಿದಾಗ ಇದು ಶೇಕಡಾ 19.50%ರಷ್ಟು ಹೆಚ್ಚುವರಿ ದರಗಳು ಕಂಡು ಬಂದಿರುತ್ತದೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ಯೋಜನೆ-2) ರವರು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತ (ಟೆಂಡರ್ ಪ್ರೀಮಿಯಂ ಸೇರಿ) ರೂ.1,21,60,251.00 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ/06/ಎಚೆಚ್‌ಡಿ/2002, ದಿನಾಂಕ:24/01/2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಯುಕ್ತರು/ಆಡಳಿತಗಾರರು ರವರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಕೆ.ದಾಮೋದರ್ ರವರು 2007-08ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿದ ದರಗಳಿಗೆ ಲೋಕೋಪಯೋಗಿ ಇಲಾಖೆಯಿಂದ ಇತ್ತೀಚೆಗೆ ಹೊರಡಿಸಿದ ಸುತ್ತೋಲೆಯಂತೆ ಸಿಮೆಂಟ್ ಮತ್ತು ಸ್ಟೀಲ್‌ನ ವ್ಯತ್ಯಾಸದ ದರಗಳಿಗೆ ಹೋಲಿಸಿದಾಗ ಶೇಕಡ 19.50% ರಷ್ಟು ಹೆಚ್ಚುವರಿ ದರಗಳು ಅಥವಾ ರೂ.1,21,60,251.00 (ರೂ.ಒಂದು ಕೋಟಿ ಇಪ್ಪತ್ತೊಂದು ಲಕ್ಷದ ಅರವತ್ತು ಸಾವಿರದ ಎರಡು ನೂರ ಐವತ್ತೊಂದು ಮಾತ್ರ) ಗಳ ಟೆಂಡರ್ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11/09/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:11/09/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು.

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16-09-2008 ರ ನಡವಳಿಗಳು**

**ವಿಷಯ ಸಂಖ್ಯೆ:498/2008-09**

ಜೆ.ಎನ್.ಎನ್.ಯು.ಅರ್.ಎಮ್. ಸಹಯೋಗದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬ್ಯಾಟರಾಯನಪುರ ವಲಯದ ಯಲಹಂಕ ಕೆರೆಯ ಅಭಿವೃದ್ಧಿ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಜೆ.ಎನ್.ಎನ್.ಯು.ಅರ್.ಎಮ್. ಸಹಯೋಗದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬ್ಯಾಟರಾಯನಪುರ ವಲಯದ ಯಲಹಂಕ ಕೆರೆಯ ಹಂತ-1ರ ಅಭಿವೃದ್ಧಿ ಕಾಮಗಾರಿಗೆ ಅಂದಾಜು ಮೊತ್ತವನ್ನು 2007-08ನೇ ಸಾಲಿನ ದರಪಟ್ಟಿಯಂತೆ ರೂ.51.00 ಲಕ್ಷಗಳಿಗೆ ತಯಾರಿಸಿದ್ದು, ಸದರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮುಖ್ಯ ಅಭಿಯಂತರರು (ಯೋಜನೆ-2) ರವರು ಮಂಡಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.51.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿಂಕ:11/09/2008ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:11/09/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು.